<u>ದಿನಾಂಕ **05-08-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ಈ ಪ್ರಕರಣ 2012 ರಿಂದ ಇರುವ ಬಗ್ಗೆ ಗೊತ್ತಿದೆ. ಸಾಕ್ಷಿಯು ಮುಂದುವರೆದು ನನಗೆ ಈಗ ಗೊತ್ತಿದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನನ್ನನ್ನು ಪಕ್ಷಗಾರರಾಗಿ ಮಾಡಬೇಕು ಎಂದು ಅರ್ಜಿ ಹಾಕಿರುತ್ತೇನೆ ಎಂದರೆ ಸರಿ. ದಾವಾ ಚಾಲ್ತಿಯಲ್ಲಿರುವಾಗ ಹಣದ ಭದ್ರತೆಗೊಗಿ ಕ್ರಯಪತ್ರ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎರಡು ವರ್ಷಗಳಿಂದ ನ್ಯಾಯಾಲಯಕ್ಕೆ ಬರುತ್ತಿದ್ದೇನೆ. ಕರಾರುತಪ್ರದಲ್ಲಿ ನಮೂದಿಸಿರುವ ಸಮಯ ಮುಗಿದುಹೋಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆ ಇರುವ ಬಗ್ಗೆ ಗೊತ್ತಿದ್ದರೂ ಸಹ ಕಾಲವಿಳಂಬ ಮಾಡಲು ಅಸಲು ದಾವಾ ಸಂ.562/2026 ರಂತೆ ದಾವೆ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ನಿಡಿ-122 ರ ದಾಖಲೆಯನ್ನು 2025 ರಲ್ಲಿ ನಾನು ವಕೀಲರಿಗೆ ನೀಡಿದ್ದು ಈಗ ಸಲ್ಲಿಸಿರುತ್ತಾರೆ ಎಂದರೆ ಸರಿ. ಆ ಒಪ್ಪಂದ ಪತ್ರವನ್ನು ಸಾಲದ ಭದ್ರತೆಗೆ ಮಾಡಿಕೊಟ್ಟ ಸಾಲದ ಒಪ್ಪಂದ ಪತ್ರ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಚನ್ನರಾಯಪಟ್ಟಣದಿಂದ 2-3 ಕೀ.ಮೀಟರ್ ದೂರ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಗೆ 3-4 ಲಕ್ಷ ಮಾರುಕಟ್ಟೆ ಬೆಲೆ ಇರುತ್ತದೆ ಎಂದರೆ ಸರಿಯಲ್ಲ 10-12 ಲಕ್ಷ ಇರುತ್ತದೆ. ಕೆ ಕಾಳೇನಹಳ್ಳಿಯಲ್ಲಿ ಒಂದು ಗುಂಟೆ ಜಮೀನಿಗೆ ಕನಿಷ್ಟ 2-3 ಲಕ್ಷ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ಸಾಲದ ಭದ್ರತೆಗೆ ಬರೆಸಿಕೊಂಡ ಪತ್ರವನ್ನು ದುರುಪಯೋಗಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಹಾಲಿ ದಾವೆ ಚಾಲ್ತಿಯಲ್ಲಿರುವ ವಿಚಾರ ಗೊತ್ತಿದ್ದರೂ ಸಹ ಕ್ರಯಪತ್ರ ಮತ್ತು ಕ್ರಯಕರಾರುಪತ್ರವನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.